ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಶುಕ್ರವಾರ ದಿನಾಂಕ ೩೧ನೇ ಜನವರಿ ೧೯೮೬, ಮಾಘ ೧೧, ೧೯೦೭ ಶಕ

ವಿಧಾನಸಾಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಸದನವು ಬೆಳಿಗ್ಗೆ ೧೦ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್) ಪೀಠವನ್ನಲಂಕರಿಸಿದರು]

ವಿರೋಧ ಪಕ್ಷದ ಸದಸ್ಯರು ಧರಣಿ ಕೂತಿದ್ದರು

ವಿರೋಧ ಪಕ್ಷದವರಿಂದ ಧರಣಿ ಮುಷ್ಕರ—ದಾವಣಗೆರೆಯ ತಪ್ಪಿತಸ್ಥ ಅಧಿಕಾರಿ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ.

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಕುಳಿತು ಕೊಳ್ಳಬೇಕೆಂದು ಕಳಕಳಿಯಿಂದ ವಿನಂತಿಸುತ್ತೇನೆ.

(ಧರಣಿ ಹೂಡಿದ್ದ ಎಲ್ಲಾ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ವಾಪಸ್ಸು ಹೋಗಿ ಕುಳಿತುಕೊಂಡರು).

ಶ್ರೀ ಎಸ್. ಬಂಗಾರಪ್ಪ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ತಮಗೆ ಸ್ವಲ್ಪ ತೊಂದರೆ ಕೊಟ್ಟಿದ್ದೇವೆ, ದಯವಿಟ್ಟು ಕ್ಷಮಿಸಬೇಕು. ಅನಿವಾರ್ಯವಾಗಿ ನಾವು ನಿನ್ನೆ ಧರಣಿ ಕೂರತಕ್ಕ ಪಂಟ್ಟಕ್ಕೆ ಹೋಗಬೇಕಾಯಿತು. ತಮಗೆ ತೊಂದರೆಯಾಯಿತು ಎಂಬ ಭಾವನೆ ನಮಗೆ ಇದೆ. ದಾವಣಗೆರೆಯಲ್ಲಿ ನಡೆದ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ವಿಷಯ ಈ ಸದನದಲ್ಲಿ ಪ್ರಸ್ತಾಪವಾದಾಗ ಈ ಪರಿಸ್ಥಿತಿ ಉದ್ಭವವಾಯಿತು. ಈಗ ನನ್ನ ಪಾದ ಇಷ್ಟೆ. ಅದು ಕಾಶಾಲ ಅವರ ಪ್ರಶ್ನೆ ಇರಬಹುದು ಪೆಂಕಟರಾಮಯ್ಯನವರ ಪ್ರಶ್ನೆ ಇರಬಹುದು ಅಥವಾ ಆ ಕಡೆ ಕುಳಿತ ಸದಸ್ಯರ ಪ್ರಶ್ನೆ ಇರಬಹುದು. ನಮಗೆ ಈ ಸದನದ ಶಾಸಕರ ಗೌರವದ ಪ್ರಶ್ನೆ ಮುಖ್ಯ. ಇದು ಪ್ರಜಾಪ್ರಭುತ್ವ. ಶಾಸಕರು ಜನರ ಪ್ರತಿನಿಧಿಗಳು. ಅವರಿಗೆ ಸಂಪೂರ್ಣ ಗೌರವ ಕೊಡಬೇಕಾಗುತ್ತದೆಂಬ ದೃಷ್ಟಿಯಿಂದ ಈ ವಿಚಾರವನ್ನು ಗಮನಕ್ಕೆ ತಗೆದುಕೊಂಡಿದ್ದೇವೆ. ಪಕ್ಷ ಭೇದದ ವಿಚಾರವನ್ನು ಪರೆತು ಎಲ್ಲರೂ ಗಮನ ಹರಿಸಬೇಕಾದ ವಿಚಾರ ಇದು. ಯಾವುದೋ ಅಧಿಕಾರಿ ಮೇಲೆ ಆರೋಪ ಮಾಡತಕ್ಕ ವಿಚಾರ ಅಲ್ಲ. ಕಾನೂನು ಪಾಲನೆ ಮಾಡತಕ್ಕ ಕಾಲದಲ್ಲಿ ಕಾನೂನಿಗೆ ವಿರುದ್ಧವಾಗಿ ಒಬ್ಬ ಅಧಿಕಾರಿ ವರ್ತಿಸಿದಾಗ ಅವನ ಮೇಲೆ ಕ್ರಮ ಕೈಗೊಳ್ಳಲೇಬೇಕಾಗುತ್ತದೆ. ಇರತಕ್ಕ ಎಲ್ಲ ಅಧಿಕಾರಿಗಳು ತಪ್ಪಿತಸ್ಥರು ಎಂದು ಹೇಳುತ್ತಿಲ್ಲ. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಜರುಗಿಸದಿದ್ದರೆ, ಜನರ ಪ್ರತಿನಿಧಿಗಳಿಗೆ ತೊಂದರೆ ಆದಾಗ ಕ್ರಮ ಜರುಗಿಸದಿದ್ದರೆ ಸಾಮಾನ್ಯ ಜನರ ಪರಿಸ್ಥಿತಿ ಏನಾದೀತು ಎಂಬ ನೋವಿನ ಹಿನ್ನೆಲೆಯಲ್ಲಿ ಈ ವಾದವನ್ನು ಮಂಡನೆ ಮಾಡಿದ್ದೆವು. ಆದರ ಬಗ್ಗೆ ನಿನ್ನೆ ಸಾಕಷ್ಟು ಚರ್ಚೆ ನಡೆಯಿತು. ನಾವು ತಕ್ಷಣ ಧರಣಿ ಕೂರುವ ವಿಚಾರ ಮಾಡಲಿಲ್ಲ. ಸಾಕಷ್ಟು ಒತ್ತಡವನ್ನು ಸರ್ಕಾರದ ಮೇಲೆ ತರತಕ್ಕ ಪ್ರಾಮಾಣಿಕ ಪ್ರಯತ್ನ ಮಾಡಿದೆವು. ನಿಜ ಹೇಳಬೇಕೆಂದರೆ ಸದನದಲ್ಲಿ ಕುಳಿತಿರತಕ್ಕ ಸದಸ್ಯರು ಈವಿಚಾರದ ಬಗ್ಗೆ ಹೆಚ್ಚಿನ ಗಮನಹರಿಸಿರುವುದು ನಮ್ಮ ಮನಸ್ಸಿಗೆ ಸಮಾಧಾನವಾಗಿದೆ. ಅದು ಏನೇ ಇರಲಿ. ಶಾಸನಸಭಾ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವಿವರವಾಗಿ ಸದನದ ಪಂಂದಿಟ್ಟಾಗ ಅವು ಸದನದ ಸ್ವತ್ತಾಗುತ್ತವೆ. ಇದರಿಂದ ಒಬ್ಬ ಅಧಿಕಾರಿ ತಪ್ಪಿತಸ್ಥ ಎಂದು ಹೇಳುವುದಕ್ಕೆ ಸರ್ಕಾರಕ್ಕೆ ಸಾಕಷ್ಟು ಕಾರಣಗಳು ದೊರೆಯುತ್ತವೆ. ಆದ್ದರಿಂದ ಅಂಥ ಅಧಿಕಾರಿಯನ್ನು ಸಸ್ಪೆಂಡ್ ಮಾಡಿ ಮುಂದಿನ ಕ್ರಮ ಜರುಗಿಸದಿದ್ದರೆ ನಾಳೆ ವಿಚಾರಣೆ ಮಾಡತಕ್ಕ ಕಾಲದಲ್ಲಿ ಸತ್ಯಾಂಶ ಹೊರಬೀಳುವುದಿಲ್ಲ ಎಂಬ ಕಾರಣದಿಂದ ಒತ್ತಾಯಿಸಿದ್ದೇವೆ. ಇದನು